ಮತ್ತೊಂದು ಕಣ್ಣಿಗೆ ಬೆಣ್ಣೆ ಮಾದರಿಯಲ್ಲಿ ತಾರತಮ್ಯವನ್ನು ಮಾಡಲಾಗಿದೆ. ಅವರು ಕೊಡುವ 13,000 ರೂಪಾಯಿಗಳ ಮಾಹೆಯಾನ ಕೂಡ ಸಾಲುವುದಿಲ್ಲ. ಮಾನ್ಯ ಸಚಿವರು ವೇತನವನ್ನು ಹೆಚ್ಚು ಮಾಡಿ ಖಾಯಂಗೊಳಿಸುವ ಬಗ್ಗೆ ಕ್ರಮ ತೆಗೆದುಕೊಂಡರೆ ಒಳ್ಳೆಯದು.

ಶ್ರೀ ಎಸ್.ಸುರೇಶ್ ಕುಮಾರ್:– (ಮಾನ್ಯ ಕಾನೂನು, ಮಾನವ ಹಕ್ಕು, ಸಂಸದೀಯ ವ್ಯವಹಾರ, ನಗರಾಭಿವೃದ್ಧಿ, ಬೆಂಗಳೂರು ಜಲಮಂಡಳಿ ಸಚಿವರು) (ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರ ಪರವಾಗಿ): ಮಾನ್ಯ ಅಧ್ಯಕ್ಷರೆ, ಸಚಿವ ಸಂಪುಟ ಸಭೆಯಲ್ಲೂ ಕೂಡ ಈ ವಿಚಾರ ಬಂದಿದೆ. ಈ ವಿಷಯ ಬಂದಾಗ ಈಗಾಗಲೇ ಮಂಜೂರಾಗಿ ಮಂಜೂರಾದ ಹುದ್ದೆಗಳಲ್ಲಿ ಯಾರು ಆಯುಷ್ ವೈದ್ಯರ ಹುದ್ದೆಗಳಲ್ಲಿ ರೋಸ್ಟರ್ ಪದ್ಧತಿ ಮೂಲಕ ಯಾರು ಕೆಲಸ ಮಾಡುತ್ತಿದ್ದಾರೆ ಆ 147 ಆಯುಷ್ ವೈದ್ಯರನ್ನು ಖಾಯಂಗೊಳಿ–ಸುವುದಕ್ಕೋಸ್ಕರ ಒಂದು ನಿರ್ಧಾರವನ್ನು ಕೈಗೊಂಡಿದ್ದೇವೆ. ಯಾವುದೇ ಹುದ್ದೆಯನ್ನು ಖಾಯಂಗೊಳಿಸುವಾಗ ಉಮಾದೇವಿ ಪ್ರಕರಣದ ನಾಲ್ಕು ಷರತ್ತುಗಳು ಒಪ್ಪಿಗೆ ಆದರೆ ಮಾತ್ರ ಮಾಡಬೇಕಾಗುತ್ತದೆ. ಮೊದಲನೇ ಹೆಜ್ಜೆಯಾಗಿ 147 ಆಯುಷ್ ವೈದ್ಯರನ್ನು ನಿಯಮಾನುಸಾರ ಖಾಯಂಗೊಳಿ–ಸುತ್ತಿದ್ದೇವೆ. ವೇತನವನ್ನು ಹೆಚ್ಚು ಮಾಡುವ ವಿಷಯವನ್ನು ಕೂಡ ನಾವು ಪರಿಶೀಲಿಸುತ್ತೇವೆ.

6.ವಿಷಯ: ಸಾರಾಯಿ ಮಾರಾಟವನ್ನು ನಿಷೇಧ ಮಾಡಿದ್ದರಿಂದ ಸಂಕಷ್ಟಕ್ಕೆ ಒಳಗಾಗಿರುವ ಸಾರಾಯಿ ಮಾರಾಟಗಾರರ ಸಾಲವನ್ನು ಮನ್ನಾ ಮಾಡುವ ಬಗ್ಗೆ.

ಶ್ರೀ ಗೋವಿಂದ ಎಂ. ಕಾರಜೋಳ (ಸಣ್ಣ ನೀರಾವರಿ, ಕನ್ನಡ ಮತ್ತು ಸಂಸ್ಕೃತಿ ಸಚಿವರು)(ಸಮಾಜ ಕಲ್ಯಾಣ, ಹಿಂದುಳಿದ ವರ್ಗಗಳ ಕಲ್ಯಾಣ ಮತ್ತು ಬಂದೀಖಾನೆ ಸಚಿವರ ಪರವಾಗಿ) :– ಮಾನ್ಯ ಅಧ್ಯಕ್ಷರೆ, ಸಾರಾಯಿ ಮಾರಾಟದ ನಿಷೇಧದಿಂದಾದ ನಿರುದ್ಯೋಗಿಗಳಿಗೆ ಸ್ವಯಂ ಉದ್ಯೋಗ ಅವಕಾಶ ಕಲ್ಪಿಸಲು ಡಿ. ದೇವರಾಜ ಅರಸು ಹಿಂದುಳಿದ ವರ್ಗಗಳ ಅಭಿವೃದ್ಧಿ ನಿಗಮದಿಂದ ಪುನಶ್ಚೇತನ ಸಾಲ ಯೋಜನೆಯನ್ನು 2010–11ನೇ ಸಾಲಿನಿಂದ ಅನುಷ್ಠಾನ–ಗೊಳಿಸಲಾಗಿದೆ. ಈ ಯೋಜನೆಯಲ್ಲಿ ಈ ಕೆಳಕಂಡಂತೆ ವರ್ಷವಾರು ಸಾಲ ಮತ್ತು ಸಹಾಯ ಧನವನ್ನು ಮಂಜೂರುಮಾಡಿದೆ.

(ಲಕ್ಷ ರೂ.ಗಳಲ್ಲಿ)

ಕ್ರ.ಸಂ.	ವರ್ಷ	ಫಲಾನುಭವಿಗಳ ಸಂಖ್ಯೆ	ಮೊತ್ತ		
			ಸಹಾಯ ಧನ	ಸಾಲ	ಒಟ್ಟು
1	2010-11	2361	108.79	617.59	726.38
2	2011-12	592	26.24	143.09	169.33
3	2012-13	20	0.88	5.21	6.09
	ಒಟ್ಟು	2973	135.91	765.89	901.80

ಈ ಸಾಲ ಯೋಜನೆಯನ್ನು ರಾಷ್ಟ್ರೀಯ ಹಿಂದುಳಿದ ವರ್ಗಗಳ ಹಣಕಾಸು ಮತ್ತು ಅಭಿವೃದ್ಧಿ ನಿಗಮ. ನವದೆಹಲಿ ಇವರಿಂದ ಸಾಲ ಪಡೆದು ರಾಜ್ಯದ ಸಾರಾಯಿ ಮಾರಾಟದ ನಿಷೇಧದಿಂದಾದ ನಿರುದ್ಯೋಗಿಗಳಿಗೆ ಸ್ವಯಂ ಉದ್ಯೋಗ ಕಲ್ಪಿಸಲು ಸಾಲ ಮತ್ತು ಸಹಾಯಧನ ಮಂಜೂರು ಮಾಡಲಾಗಿರುತ್ತದೆ. ಈ ಸಾಲಕ್ಕೆ ವೇಕಡ 6ರ ಬಡ್ಡಿ ವಿಧಿಸಲಾಗಿದೆ.

ದಿನಾಂಕ 31-01-2013 ರ ಅಂತ್ಯದವರೆಗೆ ರೂ.104.87 ಲಕ್ಷಗಳು ವಸೂಲಾತಿ ಆಗಿರುತ್ತದೆ.

ಡಿ. ದೇವರಾಜ ಅರಸು ಹಿಂದುಳಿದವರ್ಗಗಳ ಅಭಿವೃದ್ಧಿ ನಿಗಮದಿಂದ ಹಿಂದುಳಿದ ವರ್ಗಗಳ ಭೂ ರಹಿತ ಕೃಷಿ ಕೂಲಿ/ಕಾರ್ಮಿಕರಿಗೆ, ಅಲೆಮಾರಿ/ಅರೆ ಅಲೆಮಾರಿ ಜನಾಂಗದವರಿಗೆ ಹಾಗೂ ದೋಬಿ, ಕ್ಷೌರಿಕ ವೃತ್ತಿ, ಕಮ್ಮಾರಿಕೆ, ಕುಂಬಾರಿಕೆ ಮುಂತಾದ ಸಾಂಪ್ರದಾಯಿಕ ವೃತ್ತಿದಾರರಿಗೆ ನಿಗಮ ವಿವಿಧ ಯೋಜನೆಗಳಲ್ಲಿ ಸ್ವಯಂ ಉದ್ಯೋಗ ಕೈಗೊಳ್ಳಲುಸಾಲ/ಸಹಾಯಧನ ಸೌಲಭ್ಯ ಮಂಜೂರು ಮಾಡಲಾಗುತ್ತಿದೆ. ಈ ಯೋಜನೆಗಳಲ್ಲಿ ಸಾಲ ಪಡೆದಂತವರಿಗೆ ಇದುವರೆಗೆ ನಿಗಮದಿಂದ ಯಾವುದೇ ತರಹದ ಸಾಲ ಮತ್ತು ಬಡ್ಡಿ ಮನ್ನಾ ಮಾಡಿರುವುದಿಲ್ಲ.

ಪುನಶ್ಚೇತನ ಯೋಜನೆಯನ್ನು ರಾಷ್ಟ್ರೀಯ ಹಿಂದುಳಿದ ವರ್ಗಗಳ ಹಣಕಾಸು ಮತ್ತು ಅಭಿವೃದ್ಧಿ ನಿಗಮ. ನವದೆಹಲಿ ಇವರಿಂದ ಸಾಲ ಪಡೆದು ಅನುಷ್ಠಾನಗೊಳಿಸಿರುವುದರಿಂದ ಈ ಸಾಲದ ಮೊತ್ತವನ್ನು ಎನ್.ಬಿ.ಸಿ.ಎಫ್.ಡಿ.ಸಿ. ಯವರಿಗೆ ಡಿ. ದೇವರಾಜ ಅರಸು ಹಿಂದುಳಿದ ವರ್ಗಗಳ ಅಭಿವೃದ್ಧಿ

ನಿಗಮದಿಂದ ಮರುಪಾವತಿ ಮಾಡಬೇಕು. ಆದ್ದರಿಂದ, ಈ ಸಾಲದ ಮೊತ್ತವನ್ನು ಮನ್ನಾ ಮಾಡಲು ಅವಕಾಶವಿರುವುದಿಲ್ಲ.

ಶ್ರೀ ಹೆಚ್.ಸಿ.ಬಾಲಕೃಷ್ಣ (ಮಾಗಡಿ) :– ಮಾನ್ಯ ಅಧ್ಯಕ್ಷರೆ, ಸಮ್ಮಿಶ್ರ ಸರ್ಕಾರದಲ್ಲಿ ಸಾರಾಯಿ ಮಾರಾಟ ನಿಷೇಧ ಮಾಡಿರುವುದರಿಂದ ಸಾರಾಯಿ ಮಾರಾಟ ಮಾಡುವವರು ಅನೇಕ ಜನ ನಿರುದ್ಯೋಗಿಗಳಾಗಿದ್ದಾರೆ. ಅವರಿಗೆ ಸಾಲವನ್ನು ಸರ್ಕಾರದಿಂದ ಒದಗಿಸಿಕೊಡಲಾಗಿದೆ. ಈ ಸಾಲವನ್ನು ಅವರು ಬೇರೆ ಬೇರೆ ರೀತಿ ಉಪಯೋಗಿಸಿರುವುದರಿಂದ ಸಾಕಷ್ಟು ಜನ ನಷ್ಟ ಕೂಡ ಅನುಭವಿಸಿದ್ದಾರೆ. ನಾನು ತಮ್ಮ ಮೂಲಕ ಸರ್ಕಾರಕ್ಕೆ ವಿನಂತಿ ಮಾಡುತ್ತೇನೆ ಈ ಸಾಲವನ್ನು ದಯಮಾಡಿ ಮನ್ನಾ ಮಾಡಿ. ಎರಡು ಮಾಹಿತಿಯನ್ನು ಕೊಟ್ಟಿದ್ದಾರೆ. ಒಂದು ರಾಷ್ಟ್ರೀಯ ಹಿಂದುಳಿದ ವರ್ಗಗಳ ಹಣಕಾಸು ಮತ್ತು ಅಭಿವೃದ್ಧಿ ನಿಗಮದಿಂದ ಕೊಟ್ಟಿದ್ದೇವೆಂದು ಹೇಳಿದ್ದಾರೆ. ಮತ್ತೊಂದು ಡಿ. ದೇವರಾಜ ಅರಸು ಹಿಂದುಳಿದ ವರ್ಗಗಳ ಅಭಿವೃದ್ಧಿ ನಿಗಮದಿಂದ ಕೊಟ್ಟಿದ್ದೇವೆಂದು ಹೇಳಿದ್ದಾರೆ. ಯಾವ್ಯಾವುದರಿಂದ ಎಷ್ಟೆಷ್ಟು ಸಾಲವನ್ನು ಕೊಟ್ಟಿದ್ದೇವೆಂದು ಅವರು ಹೇಳಿಲ್ಲ. ಯಾವುದರಲ್ಲಾದರೂ ನೀವು ಸಾಲವನ್ನು ಕೊಟ್ಟಿರಿ ದಯಮಾಡಿ ಇದನ್ನು ಮನ್ನಾ ಮಾಡಿ ಸಾರಾಯಿ ಮಾರಾಟ ಮಾಡುವವರು ಅತ್ಯಂತ ಕಷ್ಟದಿಂದ ಜೀವನ ನಡೆಸುತ್ತಿರುವುದನ್ನು ನಾವು ಇವತ್ತು ನೋಡುತ್ತಿದ್ದೇವೆ. ಅವರ ಸಹಾಯಕ್ಕೆ ದಯಮಾಡಿ ಸರ್ಕಾರ ಬರಬೇಕೆಂದು ತಮ್ಮ ಮೂಲಕ ಸರ್ಕಾರವನ್ನು ಒತ್ತಾಯ ಮಾಡುತ್ತೇನೆ. ಸಾಲವನ್ನು ದಯಮಾಡಿ ಮನ್ನಾ ಮಾಡಬೇಕು.

ಶ್ರೀ ಗೋವಿಂದ ಎಂ. ಕಾರಜೋಳ (ಮಾನ್ಯ ಸಣ್ಣ ನೀರಾವರಿ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಚಿವರು)(ಮಾನ್ಯ ಸಮಾಜ ಕಲ್ಯಾಣ ಮತ್ತು ಬಂದಿಖಾನೆ ಸಚಿವರ ಪರವಾಗಿ) :– ಮಾನ್ಯ ಅಧ್ಯಕ್ಷರೆ, ಸಾಲ ಮನ್ನಾ ಮಾಡುವುದಕ್ಕೆ ಸಾಧ್ಯವಿಲ್ಲವೆಂದು ಈಗಾಗಲೇ ಉತ್ತರ ಕೊಟ್ಟಿದ್ದೇವೆ. ಸಾಲ ಮನ್ನಾ ಮಾಡುವುದಕ್ಕೆ ಸಾಧ್ಯವಾಗುವುದಿಲ್ಲ.

ಶ್ರೀ ಹೆಚ್.ಸಿ.ಬಾಲಕೃಷ್ಣ :– ಸಾಲವನ್ನು ಮನ್ನಾ ಮಾಡುವುದಕ್ಕಾಗು–ವುದಿಲ್ಲ, ಹೋಗಲಿ ಬಡ್ಡಿಯನ್ನಾದರೂ ಮನ್ನಾ ಮಾಡುತ್ತೀರಾ? ಕೇಂದ್ರ ರಾಷ್ಟ್ರೀಯ ಹಿಂದುಳಿದ ವರ್ಗಗಳ ಹಣಕಾಸು ಮತ್ತು ಅಭಿವೃದ್ಧಿ ನಿಗಮದಿಂದ

ಕೊಟ್ಟಿದ್ದೇವೆಂದು ಹೇಳಿದ್ದೀರಿ, ಬಡ್ಡಿಯನ್ನಾದರೂ ಮನ್ನಾ ಮಾಡಿ. ನಿಮಗೆ ಸಾರಾಯಿ ಮಾರಾಟ ಮಾಡುತ್ತಿರುವವರ ಪರಿಸ್ಥಿತಿ ಗೊತ್ತಿಲ್ಲ.

(ಗೊಂದಲ)

ಶ್ರೀ ಬಂಡೆಪ್ಪ ಖಾಶೆಂಪೂರ್ :– ಮಾನ್ಯ ಉಪ ಮುಖ್ಯಮಂತ್ರಿಗಳು ಈ ಬಗ್ಗೆ ಎಷ್ಟು ಬದ್ಧತೆಯಿದೆಯೆಂದು ಹೇಳಿದರು. ಪಾಪ ಆ ಬಡ ಮಂದಿ ಸಾರಾಯಿ ಮಾರಾಟವನ್ನೆಲ್ಲಾ ಬಂದ್ ಮಾಡಿಕೊಂಡಿದ್ದಾರೆ. ಅವರಿಗೂ ಸ್ವಲ್ಪ ಕರುಣೆ ತೋರಿಸಿ.

(ಗೊಂದಲ)

ಶ್ರೀ ಹೆಚ್.ಸಿ.ಬಾಲಕೃಷ್ಣ :– ನಾವೆಲ್ಲಾ ಸೇರಿ ಪಾಪ ಅವರ ಬಾಯಿಗೆ ಮಣ್ಣನ್ನು ಹಾಕಿದ್ದೇವೆ. ನೀವು 20,000, 25,000 ರೂಪಾಯಿಗಳ ಸಾಲವನ್ನೇನೋ ಕೊಟ್ಟಿದ್ದೀರಿ. ನಿಮಗೆ ಸಾಲ ಮನ್ನಾ ಮಾಡುವುದಕ್ಕೇನು ತೊಂದರೆಯಿದೆ? ದಯಾಮಾಡಿ ಏನಾದರೊಂದು ಕ್ರಮ ತೆಗೆದುಕೊಳ್ಳಬೇಕು.

ಶ್ರೀ ಗೋವಿಂದ ಎಂ. ಕಾರಜೋಳ :– ಮಾನ್ಯ ಅಧ್ಯಕ್ಷರೆ, ಸಾಲವನ್ನು ಮನ್ನಾ ಮಾಡುವುದಕ್ಕೆ ಸಾಧ್ಯವಿಲ್ಲ. ಅವರು ಹೇಳಿರುವ ಸಲಹೆಯನ್ನು ಪರಿಗಣಿಸುವುದಕ್ಕೆ ಸರ್ಕಾರ ಸಿದ್ಧವಿದೆ.

ಶ್ರೀ ಹೆಚ್.ಸಿ.ಬಾಲಕೃಷ್ಣ :–ಇದು ಸಣ್ಣ ಮೊತ್ತ. ಕೇವಲ ಒಂಭತ್ತು ಕೋಟಿ ರೂಪಾಯಿಗಳಷ್ಟಿದೆ.

7.ವಿಷಯ: ಏಲಕ್ಕಿ ಬೆಳೆಗೆ ತಗುಲಿರುವ ಕೊಕ್ಕೆ ಕಂದು ರೋಗದಿಂದ ನಷ್ಟಕ್ಕೊಳಗಾಗಿರುವ ರೈತರ ಸಾಲ ಮನ್ನಾ ಮಾಡುವ ಬಗ್ಗೆ.

ಶ್ರೀ ಎಸ್.ಸುರೇಶ್ ಕುಮಾರ್ :– (ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು)(ಮಾನ್ಯ ಮುಖ್ಯಮಂತ್ರಿಗಳ ಪರವಾಗಿ) ಮಾನ್ಯ ಅಧ್ಯಕ್ಷರೆ, ಏಲಕ್ಕಿ ಬೆಳೆಗೆ ಕೊಕ್ಕೆ ಕಂದು ರೋಗವು ಹಾಸನ. ಕೊಡಗು, ಚಿಕ್ಕಮಗಳೂರು ಮತ್ತು ಶಿವಮೊಗ್ಗ ಜಿಲ್ಲೆಗಳಲ್ಲಿ ಕಾಣಿಸಿಕೊಂಡಿರುತ್ತದೆ. ಈ ರೋಗದ ಹಾವಳಿಯು ಹಾಸನ ಜಿಲ್ಲೆಯ ಸಕಲೇಶಪುರ ತಾಲ್ಲೂಕಿನಲ್ಲಿ ಹೆಚ್ಚಿನ ಪ್ರಮಾಣದಲ್ಲಿ ಕಾಣಿಸಿಕೊಂಡಿರುತ್ತದೆ. ಈ ತಾಲ್ಲೂಕಿನಲ್ಲಿ ಬೆಳೆದಿರುವ ಸುಮಾರು 7390 ಹೆಕ್ಟೇರ್ ಪ್ರದೇಶದಲ್ಲಿನ ಏಲಕ್ಕಿ ಬೆಳೆಯಲ್ಲಿ ಶೇಕಡಾ 30 ರಿಂದ 40ರಷ್ಟು ವಿಸ್ತೀರ್ಣದಲ್ಲಿನ ಬೆಳೆಗೆ ಕೊಕ್ಕೆ ಕಂದು ರೋಗವು ತಗಲಿರುವುದು ಕಂಡು ಬಂದಿರುತ್ತದೆ ಈ